ಶ್ರೀ ಡಿ.ಬಿ.ಚಂದ್ರೇಗೌಡ:— ನಾನು ಒಂದು ನಿಲುವಳಿ ಸೂಚನೆ ಕಳುಹಿಸಿದ್ದೆ. ತಾವು ಅದನ್ನು ತಿರಸ್ಕರಿಸಿದ್ದೀರಿ ಎಂಬ ಪತ್ರ ಕೂಡ ನನಗೆ ಬಂದಿದೆ, ಆ ಅಧಿಕಾರ ತಮಗೆ ಇದೆ.

ಅಧ್ಯಕ್ಷರು:— ನಾನು ತಿರಸ್ಕರಿಸಿಲ್ಲ. ಅಂಗೀಕರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದೇನೆ

ಶ್ರೀ ಡಿ.ಬಿ.ಚಂದ್ರೇಗೌಡ:— ಅದರ ಅರ್ಥ ಅದೇ ಎಂದು ನಾನು ತಿಳಿದುಕೊಂಡಿದ್ದೇನೆ ಸಾಧ್ಯವಾಗದೇ ಇರುವುದಕ್ಕೆ ಕಾರಣ ಅದರೂ ಕೇಳಿ ತಿಳಿದುಕೊಳ್ಳಬೇಕಲ್ಲ,

ಅಧ್ಯಕ್ಷರೂ:— ಅದು ನನ್ನ ಛೇಂಬರ್‌ನಲ್ಲಿ.

ಶ್ರೀ ವಾಟಾಳ್ ನಾಗರಾಜ್:— ಛೇಂಬರ್‌ನಲ್ಲಿ ಗಂಟ್ಟಾಗಿ ಮಾಡುವ ವಿಷಯ ಬೇಡ.

ಅಧ್ಯಕ್ಷರು:— ಇದು ಕೌಲ್ ಅಂಡ್ ಶಕ್ದರ್ ಇದ್ದಾರಲ್ಲ ಅವರು ಬರೆತಿರತಕ್ಕದ್ದು.

## ರೈತರ ಬೇಡಿಕೆಗಳ ಬಗ್ಗೆ ಪ್ರಸ್ತಾಪ ಮಾಡಲು ಅನುಮತಿ ಕೋರಿಕೆ ಮತ್ತು ಇದರ ಈಡೇರಿಕೆಗೆ ಬಿ.ಜೆ.ಪಿ. ಅಧ್ಯಕ್ಷರಿಂದ ಉಪವಾಸ ಸತ್ಯಾಗ್ರಹ

†ಶ್ರೀ ಡಿ.ಬಿ.ಚಂದ್ರೇಗೌಡ:— ತಮಗೆ ಅಧಿಕಾರ ಕೊಟ್ಟಿದ್ದಾರೆ. ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ ವಸ್ತು ಸ್ಥಿತಿಯನ್ನು ತಮ್ಮ ಗಮನಕ್ಕೆ ತರಬೇಕು. ನಾವು ನಿಲುವಳಿ ಸೂಚನೆಯನ್ನು ಕಳುಹಿಸುವಾಗ ತೀರಾ ಗಂಭೀರವಲ್ಲದ ಸಮಸ್ಯೆಮೇಲೆ ಕಳುಹಿಸುವುದಿಲ್ಲ. ಈ ಸದನದ ಸದಸ್ಯರೂ ಒಂದು ರಾಷ್ಟ್ರೀಯ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರೂ ಮತ್ತು ಈ ಸದನದ ಆ ಪಕ್ಷದ ನಾಯಕರೂ ಆದ ಭಾರತೀಯ ಜನತ ಪಕ್ಷದ ಶ್ರೀಮಾನ್ ಯಡಿಯೂರಪ್ಪನವರು ಕಳೆದ ಒಂದು ವಾರದಿಂದ ವಿಧಾನ ಸೌಧದ ಮುಂದೆ ಇರತಕ್ಕ ಕಬ್ಬನ್ ಪಾರ್ಕಿನಲ್ಲಿ ಉಪವಾಸ ಕುಳಿತಿದ್ದಾರೆ. ಅವರು ಉಪವಾಸ ಕುಳಿತ್ತಿರುವುದಕ್ಕೆ ಕಾರಣ ಏನು ಎಂಬುದನ್ನು ಹೇಳಿದ್ದಾರೆ. ರಾಜ್ಯಾದ್ಯಂತ ಇರುವ ರೈತರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಅವರು ಉಪವಾಸ ಮಾಡುತ್ತಿದ್ದಾರೆ.

ಕನಿಷ್ಠ ಪಕ್ಷ ಇವತ್ತು ಸರ್ಕಾರದ ಪರವಾಗಿ ಯಾರಾದರೂ ಒಬ್ಬರೂ ಅಲ್ಲಿಗೆ ಹೋಗಿ ಅವರ ಕಷ್ಟವನ್ನು ವಿಚಾರಿಸಬೇಕಲ್ಲಿ ಸದನದಲ್ಲಿ ನಾವು ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುವುದು ಸರಿ ಕಾಣುವುದಿಲ್ಲ. ಮತ್ತೆ ಇದನ್ನು ಈ ಸದನದಲ್ಲಿ ಯಾವ ರೂಪದಲ್ಲಿ ಪ್ರಸ್ತಾಪ ಮಾಡಬೇಕೆಂದು ತಮ್ಮನ್ನು ಪ್ರಶ್ನಿಸಂತ್ತೇನೆ. ಇನ್ನು ಎರಡನೆಯದಾಗಿ ಈ ರಾಜ್ಯದ ರೈತರು ನಗರಪ್ರವೇಶ ಮಾಡಿದ್ದಾರೆ. ಇವತ್ತು ನಾವು ಬೆಳಿಗ್ಗೆ ವಿಧಾನಸೌಧವನ್ನು ಪ್ರವೇಶ ಮಾಡಿದ ಸಮಯದಲ್ಲಿ ಸುತ್ತಲಿನ ಬಂದೋಬಸ್ತು ನೋಡಿದೆವು. ಈ ಪೋಲೀಸ್ ಬಂದೋಬಸ್ತಿನಲ್ಲಿ ರೈತರು ತಮ್ಮ ಅಭಿಪ್ರಾಯವನ್ನು ಅಭಿವ್ಯಕ್ತ ಮಾಡುವುದಕ್ಕೆ ಸ್ವಾತಂತ್ರ್ಯ ಇಲ್ಲವೆಂದು ಹೇಳಿಕೊಳ್ಳೋಣವೇ ? ಹಾಗಿದ್ದರೆ ಇಂತಹ ಸದನದಲ್ಲಿ ನಿಲುವಳಿ ಸೂಚನೆ ಇಲ್ಲದೇ ಬೇರೆ ಮಾರ್ಗದಲ್ಲಿ ಹೇಗೆ ಚರ್ಚೆ ಮಾಡುವುದು ಎಂಬುದರ ಬಗ್ಗೆ ಯಾದರೂ ಯೋಚನೆ ಮಾಡಿದ್ದೀರಾ ? ಅವರು ಏಕೆ ಉಪವಾಸ ಸತ್ಯಾಗ್ರಹ ಮಾರ್ಗ ಹಿಡಿದಿದ್ದಾರೆ ಎಂಬ ಬಗ್ಗೆ ಸರ್ಕಾರ ಗಮನಹರಿಸಬೇಕು. ಒಂದು ವಾರದಿಂದ ಅವರು ಉಪವಾಸ ಮಾಡುತ್ತಿದ್ದರೂ ಏನೂ ಆಗಿಲ್ಲ ಎನ್ನುವ ರೀತಿಯಲ್ಲಿ ನಿಕೃಷ್ಟ ಸ್ಥಿತಿಗೆ ಜನತಾಂತ್ರಿಕವಾದ ಸರ್ಕಾರ ಬರಬಾರದು ಎಂದು ನನ್ನ ಭಾವನೆ. ಅದಕ್ಕಾಗಿ ನಾನು ತಮ್ಮಲ್ಲಿ ಕೇಳುತ್ತೇನೆ. ಈ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಇವತ್ತು ಸದನ ನಡೆಯುತ್ತಿದೆ. ರಾಜ್ಯದಾದ್ಯಂತ ನೂರಕ್ಕೆ ಎಪ್ಪತ್ತು ಜನ ರೈತ ಪ್ರತಿನಿಧಿಗಳು ಬಂದಿದ್ದರೂ ಏನೂ ಆಗಿಲ್ಲ ಎನ್ನುವ ರೀತಿ ಸದನದಲ್ಲಿ ಕೈ ಕಟ್ಟಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ ಆ ಕಾರಣದಿಂದ ಈ ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಇನ್ನು ಯಾವುದಾದರೂ ರೀತಿಯಲ್ಲಿ ಅವಕಾಶ ಕೊಡಬೇಕೆಂದು ಒತ್ತಾಯ ಮಾಡಿ ಈ ಬಗ್ಗೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ನಮ್ಮ ಸಹೋದ್ಯೋಗಿಗಳಾಗಿರತಕ್ಕ ಮಾನ್ಯ ಯಡಿಯೂರಪ್ಪನವರು ಕಳೆದ ಸದನದಲ್ಲೂ ಕೂಡಾ ಈ ವಿಚಾರವನ್ನು ಪ್ರಸ್ತಾಪ ಮಾಡಿದರು. ಹಾಗೂ ನಾವೂ ಕೂಡಾ ಈ ವಿಚಾರವನ್ನು ಪ್ರಸ್ತಾಪ ಮಾಡಿದೆವು, ಸಾಲ ಮನ್ನಾ ಬಗ್ಗೆ, ರೈತರ ಕೆಲವು ಬೇಡಿಕೆಗಳ ಬಗ್ಗೆ ಸರ್ಕಾರದ ನಿರ್ದಿಷ್ಟ ಧೋರಣೆ ಏನು ಎನ್ನುವ ಬಗ್ಗೆ ವಿಚಾರವನ್ನು ಪದೇ ಪದೇ ಪ್ರಸ್ತಾಪ ಮಾಡಿದ್ದೇವೆ. ಆದಾದಮೇಲೆ ಮುಖ್ಯಮಂತ್ರಿಯವರು ನಿರ್ದಿಷ್ಟವಾಗಿ ಸಾಲದ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವಸೂಲಾತಿಯನ್ನು ರದ್ದು ಮಾಡುತ್ತೇವೆ ಎಂದು ಹೇಳಿದರು. ಆ ನಂತರ ದೆಹಲಿಗೆ ಹೋಗಿ ಬಂದ ಮೇಲೆ ಎಲ್ಲಾ ಕಡೆ ವಸೂಲಾತಿ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಇದರ ಬಗ್ಗೆ ನಾವು ಕೂಡಾ ಒತ್ತಡವನ್ನು ತಂದಿದ್ದೇವೆ. ಇದರ ಬಗ್ಗೆ ರಾಷ್ಟ್ರೀಯ ಪಕ್ಷದವರು ಕಾರ್ಯಕ್ರಮ ಹಾಕಿ ಬೆಂಗಳೂರಿಗೆ ಬಂದು ಸಾವಿರಾರು ಸಂಖ್ಯೆಯಲ್ಲಿ ಸೇರಿ ಬೇಡಿಕೆಯನ್ನು ಇಟ್ಟ ಸಂದರ್ಭದಲ್ಲಿ, ಅವರಂ ೫–೬ ದಿವಸಗಳಿಂದ ಉಪವಾಸ ಮಾಡುತ್ತಿರುವ ಸಂದರ್ಭದಲ್ಲಿ ಅವರು ಬೇರೆ ರಾಜಕೀಯ ಪಕ್ಷದವರು ಎನ್ನುವ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಯವರು ನಿರ್ಲಕ್ಷ್ಯ ಮನೋಭಾವ ತಳೆಯಬಾರದು, ಮಾನ್ಯ ಮುಖ್ಯಮಂತ್ರಿಯವರು ತಾವೇ ಆಗಲೀ ಅಥವಾ ಅವರ ಸಹೋದ್ಯೋಗಿಗಳ ಮುಖಾಂತರ ಅವರನ್ನು ಸಂಪರ್ಕ ಮಾಡಿ ಏಕೆ ಧರಣಿ ಮಾಡಿದ್ದಾರೆ, ಏನು ಬೇಡಿಕೆ ಇದೆ ಎಂಬುದನ್ನು ಯೋಚನೆ ಮಾಡಬೇಕಾಗಿತ್ತು. ಹಿಂದೆ ಮುಖ್ಯ ಮಂತ್ರಿಗಳಾಗಿದ್ದವರು ಇಂತಹ ಸಂದರ್ಭ ಬಂದಾಗ ತಮ್ಮ ಸಹೋದ್ಯೋಗಿ ಮಂತ್ರಿಗಳನ್ನು ಆ ಜಾಗಕ್ಕೆ ಕಳುಹಿಸಿ ಮಾತುಕತೆ ನಡೆಸುತ್ತಿದ್ದರು. ಆದರೆ ಈಗ ಇಲ್ಲಿ ಮಾತುಕತೆ ಮಾಡಿಲ್ಲ. ಅವರು ಬೇಡಿಕೆ ಇಟ್ಟು ಉಪವಾಸ ಕುಳಿತಿರುವ ಸಂದರ್ಭದಲ್ಲಿ ನಾವು ಇಲ್ಲಿ ಕುಳಿತು ಕಾರ್ಯಕಲಾಪ ನಡೆಸಿದರೆ ರೈತರು ನಮ್ಮ ಬಗ್ಗೆ ಏನು ಅಭಿಪ್ರಾಯ ಪಡುತ್ತಾರೆಂದು ತಮಗೆ ಗೊತ್ತಿದೆಯೇ ? ಅತ್ಯಂತ ಬಹುಮತದಿಂದ ಎಂದರೆ ೧೭೭–೬೯ ಸ್ಥಾನಗಳಿಸಿ ತಾವು ಅಧಿಕಾರಕ್ಕೆ ಬಂದಿರುವ ಬಗ್ಗೆ ನಮಗೆ ಸಂಶಯ ಇಲ್ಲ. ಯಾರೂ ಕೂಡಾ ಅವರು ರೈತರು ಅಲ್ಲ ಎಂದು ಹೇಳುವುದಕ್ಕೆ ಬಯಸುವುದಿಲ್ಲ ಜನರ ವರ್ತನೆ, ನಮ್ಮ ಮತ್ತು ನಿಮ್ಮ ವರ್ತನೆಗಳ ಮೇಲೆ ಬದಲಾವಣೆ ಯಾಗುತ್ತದೆ. ನಾವು ತಪ್ಪು ಮಾಡಿದ್ದರಿಂದ ನೀವು ಅಧಿಕಾರಕ್ಕೆ ಬಂದಿರಿ. ಮುಂದೆ ಇದೇ ಪುನರಾವರ್ತನೆ ಆಗಬಹುದು. ಸಮಸ್ಯೆಗಳನ್ನು ಅವರು ಪ್ರತಿಬಿಂಬಿಸುವಾಗ ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಮುಖ್ಯಮಂತ್ರಿಗಳು ಗಮನಹರಿಸಬೇಕೆಂದು ನನ್ನ ಅಭಿಪ್ರಾಯ. ಅಧ್ಯಕ್ಷರಾದ ತಾವೂ ಕೂಡಾ ರೈತ ಪ್ರತಿನಿಧಿಗಳಾಗಿದ್ದು ರೈತರ ಸಮಸ್ಯೆಗಳನ್ನು ತಾವು ಬಹಳ ಚೆನ್ನಾಗಿ ಅರ್ಥಮಾಡಿಕೊಂಡಿದ್ದು ತಾವು ಆ ಸ್ಥಾನದಲ್ಲಿ ಇರುವುದು ಸಂತೋಷದ ಸಂಗತಿ ಎಂದು ನಾವು ಪದೇ ಪದೇ ಹೇಳಿದ್ದೇವೆ. ತಾವು ಈ ಸಂದರ್ಭದಲ್ಲಿ ಅವಕಾಶ ಮಾಡಿಕೊಡಿ. ಮಾನ್ಯ ಮುಖ್ಯಮಂತ್ರಿಗಳು ಕೂಡಾ ಇದರ ಬಗ್ಗೆ ದಯಮಾಡಿ ಒಂದು ಹೇಳಿಕೆಯನ್ನು ಕೊಟ್ಟು ಏನು ಮಾಡುತ್ತಾರೆಂದು ಹೇಳಿದರೆ ಅವರೂ ಸಮಾಧಾನದಿಂದ ಏನೋ ಕೊನೆಗೂ ಈ ಸರ್ಕಾರ ಇಷ್ಟಾದರೂ ಮಾಡಿದ್ದಾರಲ್ಲಾ ಎನ್ನುವ ಮನೋಭಾವನೆಯಿಂದ ಹೋಗುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಎತ್ತಿರತಕ್ಕ ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇನ್ನೂ ಅನೇಕ ವಿವರಗಳನ್ನು ಕೊಡುವುದು ಇದೆ, ತಾವು ಅದಕ್ಕೆ ಅವಕಾಶ ಮಾಡಿಕೊಡಬೇಕು. ತಮ್ಮ ನಿಲುವನ್ನು ಪುನರ್ ಯೋಚನೆ ಮಾಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಭಾರತೀಯ ಜನತಾ ಪಕ್ಷದ ನಾಯಕರುಗಳು ನಿನ್ನೆ ಸಾಯಂಕಾಲ ನಾನು ಊರಿನಲ್ಲಿ ಇರಲಿಲ್ಲ, ನನ್ನ ಮನೆಗೆ ಒಂದು ಪತ್ರ ಬರೆದು ಕಳುಹಿಸಿಕೊಟ್ಟಿದ್ದಾರೆ ಆ ಪತ್ರದಲ್ಲಿ ಇವತ್ತು ೫ ಗಂಟೆಗೆ ನಾವು ನಿಯೋಗ ಬರುತ್ತೇವೆಂದು ಹೇಳಿದ್ದಾರೆ. ರೈತರ ಸಮಸ್ಯೆಯ ಬಗ್ಗೆ ಮುಖ್ಯವಾಗಿ ಸಾಲ ಮನ್ನಾ ಮಾಡುವ ಸಮಸ್ಯೆಯ ಬಗ್ಗೆ ನಿಯೋಗದಲ್ಲಿ ಬಂದು ಒಂದು ಮಾನವಿ ಪತ್ರವನ್ನು ಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತಾರೆ. ಅವರು ಇವೊತ್ತು ೫ ಗಂಟೆಗೆ ಬರುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ, ಅವರ ಸಲುವಾಗಿ ನಾನು ೮ ಗಂಟೆಯವರೆಗೆ ನನ್ನ ಆಫೀಸಿನಲ್ಲಿ ಕಾಯುತ್ತೇನೆ. ಅವರು ಬಂದಾಗ ಅವರಿಗೆ ಸ್ವಾಗತ ಮಾಡುತ್ತೇನೆ ಅವರ ಮನವಿ ಪತ್ರ ತೆಗೆದುಕೊಳ್ಳುತ್ತೇನೆ, ಮತ್ತು ಅವರು ಏನಾದರೂ ಹೇಳುವುದಾದರೆ. ಅವರ ಮನವಿ ಪತ್ರದ ಜೊತೆಯಲ್ಲಿ ಅವರು ಹೇಳಬೇಕಾದುದನ್ನು ಕೇಳುತ್ತೇನೆ. ಇನ್ನು ಪ್ರಶ್ನೆ ಏನೆಂದರೆ ಸಾಲ ಮನ್ನಾ ಮಾಡುವುದರ ಬಗ್ಗೆ ಅದು ಬಹುಶಃ ಚರ್ಚೆಯಾಗಿಲ್ಲವೆನ್ನುವಂತಹದ್ದನ್ನು ಯಾರೂ ಹೇಳುವುದಕ್ಕಾಗುವುದಿಲ್ಲ. ಸಾಕಷ್ಟು ಚರ್ಚೆ ಇದೇ ಮನೆಯಲ್ಲಿ ಆಗಿದೆ. ಮತ್ತು ಇದೇ ಮನೆಯಲ್ಲಿ ಆಧಾರ ಸಹಿತ ಸಾಕಷ್ಟು ದೀರ್ಘವಾಗಿ ನಾನು ಉತ್ತರವನ್ನು ಕೊಟ್ಟಿದ್ದೇನೆ. ಅದು ಆದ ಮೇಲೆ ಏನೇನು ಕಾರ್ಯಕ್ರಮಗಳನ್ನು ನಾನು ತೆಗೆದುಕೊಂಡಿದ್ದೇನೆ ಅಂದರೆ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಮತ್ತು ರೈತರು ಸಾಲ ಪಡೆಯುವಲ್ಲಿ ಏನಾದರೂ ತೊಂದರೆಯಾಗಿದ್ದಲ್ಲಿ ಅದು ನಬಾರ್ಡ್‌ನವರಿಂದ ಆಗಿರುತ್ತದೆ. ಅವರು ಸಾಲ ಕೊಡುವುದು ಕಷ್ಟವಿದೆ. ನಬಾರ್ಡ್‌ನವರು ಒಂದು ರಿಜಿಡ್ ಆಟ್ಟಿಟ್ಯೂಡ್ ತೆಗೆದುಕೊಳ್ಳಬಾರದು. ಮುಂದಿನ ವರ್ಷ ಸಾಲ ತೆಗೆದುಕೊಳ್ಳುವುದರಲ್ಲಿ ಯಾವ ತರಹ ಅನಾನುಕೂಲ ಕಷ್ಟವಾಗಬಾರದು ಎನ್ನುವ ಬಗ್ಗೆ ನಾನು ಹೋದಸಲ ಚರ್ಚೆಮಾಡಿ ವಿರೋಧಪಕ್ಷದ ನಾಯಕರುಗಳಲ್ಲಿ ವಿನಂತಿಮಾಡಿಕೊಂಡು ಒಂದು ನಿಯೋಗ ಹೋಗೋಣವೆಂದು ಹೇಳಿದ್ದೆ. ದುರ್ದೈವ ಅದಕ್ಕೆ ಫೆವರಬಲ್ ರೆಸ್ಪಾನ್ಸ್ ಬರಲಿಲ್ಲ. ನೀವು ಬರದಿದ್ದರೂ ನಾನು ಸ್ವತಃ ಪ್ರಯತ್ನ ಮಾಡುತ್ತೇನೆ. ನಿಮಗಿಂತ ನಮಗೆ ರೈತರ ಪ್ರತಿನಿಧಿ ನಿಸಿಕೊಳ್ಳುವ ಆಶಕ್ಕೆ ಆಧಾರಿಟಿ ಈ

ಭಾಗದವರಿಗೆ ಇದೆ. ಆ ಭಾಗದವರಿಗೆ ಇಲ್ಲವಾಗಿದೆ. ನೀವು ರೈತರ ಪ್ರೇಮಿಗಳು ನಾವು ರೈತರ ದ್ರೋಹಿಗಳು ಎನ್ನುವ ಬಣ್ಣ ಬಳಿಯುವ ಕೆಲಸವನ್ನು ದಯಮಾಡಿ ನಿಲ್ಲಿಸಬೇಕು. ನೀವು ವಿರೋಧ ಪಕ್ಷದವರು ಇದನ್ನು ನಿಲ್ಲಿಸಬೇಕು. ರೈತರ ಸಾಲ ಮನ್ನಾ ಮಾಡುವ ಬಗ್ಗೆ ನಾನು ಮಾನ್ಯ ಚಂದ್ರೇಗೌಡರನ್ನು ಕೇಳುತ್ತೇನೆ, ಇವತ್ತು ಸಾಯಂಕಾಲ ೪ ಗಂಟೆಗೆ ಕೇಂದ್ರದ ಹಣಕಾಸಿನ ಸಚಿವರಾದ ಶ್ರೀಮಾನ್ ಮಧುದಂಡವತೆಯವರು ಬಜೆಟಿನಲ್ಲಿ ಪಾರ್ಲಿಮೆಂಟಿನಲ್ಲಿ ಇಡುತ್ತಾರೆ. ೪ ಗಂಟೆಯತನಕ ಕಾಯೋಣ. ನೀವು ಕಾಯುರಿ, ನಾವು ಕಾಯುತ್ತೇವೆ. ನಾನು ಕೇಂದ್ರದವರ ಜೊತೆ ಈ ಬಗ್ಗೆ ಸಮಾಲೋಚನೆ ಮಾಡಿದ ಮೇಲೆ ಅವರು ನನಗೆ ಹೇಳಿದರು. ಬಜೆಟ್‌ಗೆ ಮೊದಲು ಏನೂ ಹೇಳುವುದಕ್ಕಾಗುವುದಿಲ್ಲ ಅದು ಹೊರಗೆ ಬರಲಿ ಎಂದು ಹೇಳಿದ್ದಾರೆ. ಅವರು ಏನು ಹೇಳಿದ್ದಾರೆಂದರೆ ಪಾರ್ಟೀಲರೇ ರೈತರ ಸಾಲ ಮನ್ನಾ ಮಾಡುವ ಜವಾಬ್ದಾರಿ ನಮ್ಮ ಪಕ್ಷದ್ದು ಅದನ್ನು ನಾವು ಮಾಡುತ್ತೇವೆ. ಆದರೆ ಇದು ಐದು ವರ್ಷದ ಕಾರ್ಯಕ್ರಮವಿದೆ. ಮೊದಲನೆಯ ಹಂತದಲ್ಲಿ ಏನು ಮಾಡಬೇಕು ಎನ್ನುವುದು ಬಜೆಟ್ ಬಂದಮೇಲೆ ಗೊತ್ತಾಗುತ್ತದೆ ಆಲ್ಲಿಯವರೆಗೆ ಕಾಯಿರಿ ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕಾಗಿ ಇದೇ ವಿಚಾರವನ್ನು ತೆಗೆದುಕೊಂಡು ಆಜಿಟೇಶನ್ ಮಾಡುವುದರಲ್ಲಿ ಏನು ಅರ್ಥವಿದೆ ? ಆಜಿಟೇಶನ್ ಏತಕ್ಕೆ ಮಾಡಬೇಕು ? ಅದು ಅವಶ್ಯಕತೆ ಇದೆಯೇ ? ಸಾಲ ಮನ್ನಾ ಮಾಡುವ ವಿಚಾರ ಆ ಜವಾಬ್ದಾರಿ ಕೇಂದ್ರ ಸರ್ಕಾರದ್ದು, ರಾಜ್ಯಸರ್ಕಾರದ್ದು ಬಡ್ಡಿ, ಸಬ್ಸಿಡಿ ಬಡ್ಡಿ ವಿಚಾರ ಮಾಡಿ ಅಂದಿದ್ದಾರೆ ಆ ಬಗ್ಗೆ ನೆನ್ನೆ ಬಜೆಟ್ ಭಾಷಣದಲ್ಲಿ ಹೇಳಿದ್ದೇವೆ. ಅದಕ್ಕೂ ತಾವು ಸಮಾಧಾನ ಪಡದಿದ್ದರೆ ಬಜೆಟ್ ಮೇಲೆ ಚರ್ಚೆಗೆ ಬಂದಾಗ ತಾವು ಎಷ್ಟು ಬೇಕಾದರೂ ಪ್ರಸ್ತಾಪ ಮಾಡಿ. ನೀವು ಹೇಳಿರುವ ಪಾಯಿಂಟ್‌ಗಳಿಗೆ ಉತ್ತರ ಕೊಡುವ ಅವಕಾಶ ನಮಗೆ ಇರುತ್ತದೆ. ಇದು ನಿಲುವಳಿ ಸೂಚನೆಯ ವಿಷಯ ಅಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದ ವಿಚಾರ ಪ್ರಸ್ತಾಪ ಮಾಡಿದ್ದರಿಂದ ನಾನು ಹೇಳಂತ್ತಿದ್ದೇನೆ. ಪತ್ರಕ್ಕೆ ಉತ್ತರವನ್ನು ಬರೆದಿದ್ದೇವೆ. ಎರಡನೆಯ ಬಾರಿ ಪತ್ರಕ್ಕೂ ಕೂಡ ಉತ್ತರವನ್ನು ಕಳಿಸಿದ್ದೇವೆ. ಅದು ತಮಗೆ ತಲುಪಿದೆಯೋ ಇಲ್ಲವೋ ಗೊತ್ತಿಲ್ಲ. ನಾವು ಈಉತ್ತರದಲ್ಲಿ ಇದು ಈಗ ಅಪ್ರಸ್ತುತ, ಕಾಲ ಪಕ್ವವಾಗಿಲ್ಲ ಎಂದು ಹೇಳಿದ ಉದ್ದೇಶ ಕೂಡ ಇದೆ. ಇವತ್ತು ನಾಲ್ಕು ಗಂಟೆಗೆ ಕೇಂದ್ರದ ಆಯವ್ಯಯ ಮಂಡನೆಯಾಗುತ್ತದೆ ಕಾದು ನೋಡೋಣ ಎಂದು ಹೇಳಿದ್ದೀರಿ. ಆ ಕಾರಣಕ್ಕಾಗಿಯೇ ನಾವು ಉತ್ತರವನ್ನು ಬರೆದಿದ್ದೇವೆ. ನೀವು ಕಾಯುವ ಹಾಗೆ ನಾವು ಸಹ ಕಾಯುತ್ತಿದ್ದೇವೆ. ನಾಲ್ಕು ಗಂಟೆಗೆ ಏನು ಆಗುತ್ತದೆ ಎಂದು ನೋಡೋಣ. ನಾವು ಇಲ್ಲಿ ಯಾರು ಹೆಚ್ಚು ಯಾರು ಕಡಿಮೆ ರೈತರ ಪ್ರತಿನಿಧಿಗಳು ಎನ್ನುವ ಚರ್ಚೆಯನ್ನು ತಮ್ಮಿಂದ ನಾನು ನಿರೀಕ್ಷೆ ಮಾಡಿರಲಿಲ್ಲ. ನಾವೂ ರೈತರ ಮಕ್ಕಳೇ ತಿಳಿಹೇಳಬೇಕಿಂದರೆ ಸಮಯ ಬಂದರೆ ಹೇಳುತ್ತೇವೆ. ಹೇಳಬೇಕಾಗುತ್ತದೆ ಆದರೆ ತಾವು ಏನು ಹೇಳಿದ್ದೀರಿ, ಈ ಪ್ರಾದೇಶಿಕತೆ ಮಾಡುವಂಥದ್ದು ತರವಲ್ಲ ನಮಗೆ ಅಲ್ಲ ಎನ್ನುವ ಮಾತನ್ನು ಹೇಳಿದಾಗ ನಾವು ಈ ರೀತಿ ಹೇಳಬೇಕಾಗುತ್ತದೆ. ನಾನು ತಮ್ಮಲ್ಲಿ ಮಾನ್ಯ ಅಧ್ಯಕ್ಷರ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.....

(ಗೊಂದಲ)

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಬುದ್ಧಿವಂತರು, ಮೇಧಾವಿಗಳು ಮತ್ತು ವಿಚಾರಪರರು. ಅವರು ಈಗತಾನೇ ಒಂದು ಮಾತನ್ನು ಹೇಳಿದರು ಇವತ್ತು ನಾಲ್ಕು ಗಂಟೆಯವರೆಗೆ ಕಾಯೋಣ ಎಂದು. ನಾಲ್ಕು ಗಂಟೆಗೆ ಕಾಯೋಣ ಎಂದು ಹೇಳಿದಂಥವರು. ಈ ಪರಿಸರ ಇದ್ದಾಗ, ಅವರ ಮಾನ್ಯ ಸ್ನೇಹಿತರಾಗಿರತಕ್ಕಂಥ ಸನ್ಮಾನ್ಯ ಯಡಿಯೂರಪ್ಪ ಅವರಿಗೂ ನಾಲ್ಕು ಗಂಟೆಯವರೆಗೆ ಕಾಯೋಣ ಎಂದು ಹೇಳಬಹುದಿತ್ತು. ನಮ್ಮ ನಿಮ್ಮ ಸರ್ಕಾರ ಕೇಂದ್ರದಲ್ಲಿದೆ. ಅದು ಏನು ಆದೇಶ ಕೊಡುತ್ತದೆ ನೋಡೋಣ. ಎಂದು ಹೇಳಬಹುದಿತ್ತು. ಅದಕ್ಕಿಂತ ಮುಂಚೆ ಜನರನ್ನು ಕರೆತಂದು ಏಕೆ ರೊಚ್ಚಿಗೆಬ್ಬಿಸುತ್ತೀರಿ ಎಂದು ಏಕೆ ಬುದ್ಧಿವಾದ ಹೇಳಬಾರದಾಗಿತ್ತು ? ಅವರು ಇವತ್ತು ಬಂದು ತೊಂದರೆ ಕೊಡುತ್ತಿದ್ದಾರೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು ನಾಲ್ಕು ಗಂಟೆಯವರೆಗೆ ಕಾಯೋಣ ಎಂದು. ಈರೀತಿಯ ದ್ವಂದ್ವ ವಿಚಾರಗಳು ಬೇಡ. ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟೀಕರಣ ಮಾಡಿದ್ದಾರೆ. ನಿಮ್ಮಷ್ಟೇ ಕಳಕಳಿ ನಮಗೆ ಇದೆ, ನಮ್ಮ ಮೇಲೆ ಕೆಟ್ಟ ಭಾವನೆ ಬರುವ ಹಾಗೆ ಮಾಡಬೇಡಿ ಎಂದು ಹೇಳಿದ್ದಾರೆ. ಇದರಲ್ಲಿ ಎಲ್ಲರ ಕರ್ತವ್ಯ ಇದೆ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ತಮಗೆ ಕಳಕಳಿ ಇದ್ದಿದ್ದರೆ ನಿಯೋಗವನ್ನು ಕರೆದು

ಕೊಂಡು ಹೋಗಬಹುದಿತ್ತು. ತಾವು ಕಾರ್ಯೋಣ ಎಂದು ಹೇಳಿ ಜನರನ್ನು ಕಾಯುವುದಕ್ಕೆ ಬಿಡುವುದಿಲ್ಲ. ದಯವಿಟ್ಟು ಈ ವಿಷಯವನ್ನು ಇಲ್ಲಿಗೆ ಸಮಾಪ್ತಿ ಮಾಡಬೇಕು

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ನಾನು ಒಂದು ಸ್ಪಷ್ಟೀಕರಣವನ್ನು ಕೊಡುತ್ತೇನೆ. ಬಹುಶಃ ಇದು ದುರ್ದೈವ ಏನೋ ಉದ್ಯಾಪೂರ್ವಕವಾಗಿ ಎಂದು ನನಗೆ ಅನ್ನಿಸುವುದಿಲ್ಲ. ಒಂದು ಪ್ರಶ್ನೆ ಏನು ಆಗಿದೆ ಎಂದರೆ ತಪ್ಪು ಭಾವನೆ ವಿರೋಧ ಪಕ್ಷದ ನಾಯಕರಲ್ಲಿ ಮೂಡಿದೆ. ಸಾಲ ಮನ್ನಾ ಮಾಡುವುದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ತರುವುದಕ್ಕೆ ನಿಯೋಗ ಹೋಗಬೇಕು ಎಂದು ನಾನು ಹೇಳಿಲ್ಲ. ತಮ್ಮ ಪತ್ರವನ್ನು ನಾನು ನೋಡಿದೆ. ಆದರಲ್ಲಿ ಏನು ಬರೆದಿದ್ದೀರಿ ? ಇದೇನೂ ರಹಸ್ಯವಾದುದಲ್ಲ. ತಾವು ಒಂದು ಎಂದರೆ ಓದುತ್ತೇನೆ.

> "You are aware that the Central Government Finance Minister has already indicated that the coming Central Budget which is likely to be placed before the Parliament on the 19th of this month would have referance to the Loan-waiver issue in the light of this, we feel that it is better to wait for the Central budget. Further, we are placing this issue before the Party. We will inform you of the outcome of the deliberations.
>
> With regards,
> Yours sincerely,
> Sd/- D. B. Chandregowda,"
> M. C. Nanaiah

ನನ್ನದು ನಿಮ್ಮದು ಏನು ಪತ್ರವ್ಯವಹಾರ ಇದೆ ಅದನ್ನು ಸಭೆಯ ಮುಂದೆ ಇಡುವುದಕ್ಕೆ ನಾನು ತಯಾರಿದ್ದೇನೆ. ಸ್ಪಷ್ಟವಾಗಿ ನಾನು ಹೇಳಿದ್ದೇನೆ. ನಾವು ಸಾಲ ಮನ್ನಾ ಮಾಡುವುದಕ್ಕೆ ಕೇಂದ್ರದ ಮೇಲೆ ಒತ್ತಾಯ ಮಾಡುವುದಕ್ಕೆ ನಿಯೋಗಬೇಕಾಗಿಲ್ಲ. ನನ್ನ ಮೊದಲನೆಯ ಪತ್ರದಲ್ಲಿಯೇ ಹೇಳಿದ್ದೇನೆ. ಏಕೆಂದರೆ ಏನು ಸಾಲ ಮನ್ನಾ ಮಾಡಬೇಕು, ಸಾಲ ಮನ್ನಾ ಮಾಡಬೇಕು ಎನ್ನುವ ವಾತಾವರಣ ಇವತ್ತು ಕರ್ನಾಟಕದ ತುಂಬೆಲ್ಲಾ ಇದ್ದಾಗ ರಿಕವರಿ ನಮಗೆ ಸಾಕಷ್ಟು ಆಗುವಹಾಗಿಲ್ಲ. ಬಹುಶಃ ಮೇಲ್ಮನೆಯ ಮಾನ್ಯ ವಿರೋಧ ಪಕ್ಷದ ನಾಯಕರು ಕೂಡಾ ನನಗೆ ಹೇಳಿದ್ದಾರೆ ಮತ್ತು ಪತ್ರ ಬರೆದಿದ್ದಾರೆ. ಎಲ್ಲಿಯವರೆಗೆ ೪೦ ಪರ್ಸೆಂಟ್ ರಿಕವರಿ ಆಗುವುದಿಲ್ಲ, ಮುಂದಿನ ವರ್ಷದ ಸಾಲ ನಮಗೆ ಸಿಗುವುದಿಲ್ಲ. ರಿಫೈನಾನ್ಸಿಂಗ್‌ನ್ನು ಅವರು ನಿಲ್ಲಿಸುತ್ತಾರೆ. ಅದನ್ನು ನಾನು ಇಲ್ಲಿ ಹೇಳಿದ್ದೇನೆ, ಅದಕ್ಕಾಗಿ ನಿಯೋಗ ಬೇಕಿತ್ತು. ೧೨ ಇಲ್ಲ ೧೫ ಪರ್ಸೆಂಟ್‌ಗಿಂತ ಹೆಚ್ಚಿಗೆ ರಿಕವರಿ ಆಗುವ ಹಾಗಿಲ್ಲ. ಏಕೆಂದರೆ ನಾವು ರಿಕವರಿಗೆ ಒತ್ತಾಯ ಮಾಡುತ್ತಿಲ್ಲ. ಇವತ್ತು ವರ್ಚುಯಲ್ಲ ಅವರು ಕೊಟ್ಟಿದ್ದನ್ನು ತೆಗೆದುಕೊಳ್ಳುತ್ತಿದ್ದೇವೆ. ಹೊರತಾಗಿ ಅವರ ಮನೆಗೆ ಹೋಗಿ ಅವರ ಆಸ್ತಿ ಪಾಸ್ತಿಗಳನ್ನು ಹರಾಜು ಮಾಡಿ ಸಾಲ ವಸೂಲು ಮಾಡಿಲ್ಲ. ಹಾಗೆ ಮಾಡಬೇಡಿ ಎಂದು ಹೇಳಿದ್ದೇವೆ. ಇಂತಹ ವಾತಾವರಣದಲ್ಲಿ ೪೦ ಪರ್ಸೆಂಟ್ ರಿಕವರಿ ಆಗುತ್ತಿಲ್ಲ, ಅದು ಸಾಧ್ಯ ಕೂಡ ಇಲ್ಲ. ೪೦ ಪರ್ಸೆಂಟ್ ಆಗದೇ ಹೋದರೆ ನಬಾರ್ಡ್‌ನವರು ಮುಂದಿನ ವರ್ಷ ಫೈನಾನ್ಸ್‌ಗೆ ತಮ್ಮ ಆಫೀಸಿಗೆ ಬರಬೇಡಿ ಎಂದು ಟಫ್‌ಸ್ಟ್ಯಾಂಡ್‌ನ್ನು ತೆಗೆದುಕೊಳ್ಳುತ್ತಾರೆ.

ಬಹುಶಃ ನಿಮ್ಮ ಹಿಂದೆ ಕುಳಿತಿರುವವರೂ ಕೂಡ ಪ್ರೆಸ್‌ಗೆ ಹೇಳಿದ್ದಾರೆ. ೪೦ ಪರ್ಸೆಂಟ್ ರಿಕವರಿ ಮಾಡುವುದಕ್ಕಾಗುವುದಿಲ್ಲ. ಮುಂದಿನ ವರ್ಷ ಸಾಲ ಸಿಕ್ಕುವುದು ಕಷ್ಟವಿದೆ ಎನ್ನುವ ಮಾತನ್ನು ಬೀದರ್‌ನಲ್ಲಿ ಮಾನ್ಯ ಗುರುಪಾದಪ್ಪನವರು ಒಂದು ಸ್ಟೇಟ್‌ಮೆಂಟ್ ಕೊಟ್ಟಿರುತ್ತಾರೆ. ಅದಕ್ಕಾಗಿ ನಾನು ಹೇಳಿದೆ. ಈ ವಾತಾವರಣ ಕರ್ನಾಟಕದಲ್ಲಿ ಮೂಡಿದಾಗ. ಯಾರೂ ಕೂಡ ಆಫೀಸಿಗೆ ಹೋಗಿ ದುಡ್ಡು ಕಟ್ಟುವ ಹಾಗೆ ಇಲ್ಲ. ಸಾಲ ಮನ್ನಾ ಮಾಡುವ ವಾತಾವರಣ ಮೂಡಿದಾಗ, ಸಾಲ ಮನ್ನಾ ಮಾಡುವುದಿಲ್ಲವೆಂಬ ದೊಡ್ಡ ದೊಡ್ಡ ನಾಯಕರುಗಳು, ರಾಷ್ಟ್ರೀಯ ಪಕ್ಷದ ನಾಯಕರುಗಳು, ರಾಜಕೀಯ ಪಕ್ಷದ ನಾಯಕರುಗಳು ಹೇಳುವ ಮುನ್ನ ಯಾವ ಹೆಚ್ಚಿನವೂ ಕೂಡ ನಾನು ಸಾಲ ತಿರುಗಿಸಿ ಕೊಡುತ್ತೇನೆ: ಎಂದು ಹೇಳುವಹಾಗಿಲ್ಲ. ಆದಕ್ಕಾಗಿ ನಾನು ಹೇಳಿದೆ, ನಾವು ಎಷ್ಟೇ ಪ್ರಯತ್ನಪಟ್ಟರೂ ೧೦-೧೫ ಪರ್ಸೆಂಟ್ ಮೇಲೆ ರಿಕವರಿ ಸ್ಥಿತಿ ಹೋಗುವ ಹಾಗಿಲ್ಲ, ನಿಮ್ಮದು

೧೫ ಪರ್ಸೆಂಟ್ ರಿಕವರಿ ಇರುವುದರಿಂದ, ಮುಂದಿನ ವರ್ಷದ ರೀಫೈನಾನ್ಸ್‌ಗೆ ನಿಮ್ಮಲ್ಲಿ ಯೋಗ್ಯತೆ ಇಲ್ಲ. "you are not entitled to refinance" ಎಂದು ನಬಾರ್ಡ್‌ನವರು ರೀಫೈನಾನ್ಸ್ ನಿಲ್ಲಿಸಿದರೆ, ನಮ್ಮ ರೈತರ ಗೋಳು, ತಪ್ಪದೇ ಮತ್ತೆ ಅದೇ ಸಾವುಕಾರನ ಮನೆ ಬಾಗಿಲಿಗೆ ಹೋಗುತ್ತಾನೆ ಈ ಒಂದು ಪಾತಾಪರಣ ಇರುವುದರಿಂದ, ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿಗಳ ಹತ್ತಿರ ಒಂದು ನಿಯೋಗ ಹೋಗಿ, seek directives to NABARD to continue re-finance for the next year, irrespective of the percentage of recovery this year. ನಿಯೋಗ ಆದರ ಸಲುವಾಗಿಯೇ ಹೊರತು, ಸಾಲ ಮನ್ನಾ ಮಾಡುವ ಸಲುವಾಗಿ ನಿಯೋಗ ಇಲ್ಲ. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇವತ್ತು ನಿಯೋಗ ಹೋಗಬೇಕೆಂದು ಮತ್ತೊಮ್ಮೆ ಆಮಂತ್ರಣ ಕೊಡುವುದು ಏಕೆಂದರೆ, ಸಾಲ ಮನ್ನಾ ಮಾಡುವುದಕ್ಕೆ ಅಲ್ಲ. ಇವತ್ತು ನಮಗೆ ಭಯ ಇದೆ. ಮುಂದಿನ ವರ್ಷ ಸಾಲ ಕೊಡುವುದನ್ನು ನಬಾರ್ಡ್‌ನವರು ನಿಲ್ಲಿಸಿದರೆ, ರೈತರ ಗತಿ ಏನು, ರೈತರು ಎಲ್ಲಿ ಹೋಗಬೇಕು. ರೈತರು ಮತ್ತೆ ಅದೇ ಸಾಹುಕಾರನ ಮನೆ ಬಾಗಿಲಿಗೆ ಹೋಗ ಬೇಕಾಗುತ್ತದೆ. ಅವನು ರಕ್ತ ಹೀರುತ್ತಾನೆ. ಅತಹ ಪರಿಸ್ಥಿತಿ ಬರದ ರೀತಿಯಲ್ಲಿ ನಾವೆಲ್ಲರೂ ರೈತರ ಹಿತದೃಷ್ಟಿಯಿಂದ, ಕೇಂದ್ರದ ಹಣಕಾಸಿನ ಮಂತ್ರಿಗಳ ಮೇಲೆ ನಮ್ಮ ಪ್ರಭಾವವನ್ನು ಬೀರಿ, ನಬಾರ್ಡ್‌ನವರಿಗೆ ಡೈರೆಕ್ಷನ್ ಇಷ್ಯೂ ಮಾಡಬೇಕೆಂಬ ಸೀಮಿತವಾದ ಉದ್ದೇಶದಿಂದ ನಿಯೋಗ ಹೋಗಬೇಕೆಂದು ಹೇಳಿದ್ದೇವೆಯೇ ಹೊರತು ರೈತರ ಸಾಲ ಮನ್ನಾ ಮಾಡುವ ಬಗ್ಗೆ ನಿಯೋಗ ಹೋಗಬೇಕೆಂದು ಇರಲಿಲ್ಲ. ನಿಮಗೆ ಪೂರ್ತಿ ಅರ್ಥ ಆಗಿರಲಿಕ್ಕಿಲ್ಲ. ಆದಕ್ಕಾಗಿ ಈ ತರಹ ಪತ್ರ ಬಂದಿದೆ ಎಂದು ನನಗನಿಸುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.— ನನಗೆ ಪೂರ್ತಿ ಅರ್ಥವಾಗಿದೆ. ಆ ಕಾರಣದಿಂದಲೇ ನಾವು, ನಿಮಗಿಂತ ಮುಂಚಿತವಾಗಿ, ನಬಾರ್ಡ್ ಸಂಸ್ಥೆಯ ಅಧ್ಯಕ್ಷರೊಡನೆ ಸಮಾಲೋಚನೆ ಮಾಡಿದ್ದೇವೆ. ನನಗೆ ತಿಳಿದುಬಂದಿರುವ ಹಾಗೆ, ನಬಾರ್ಡ್‌ನವರು ರೀಫೈನಾನ್ಸ್ ಮಾಡುವುದಕ್ಕೆ ನಮ್ಮ ಆಭ್ಯಂತರ ಇಲ್ಲವೆಂದು ಹೇಳಿದ್ದಾರೆ. ಹಾಗೆ ಹೇಳುವುದಕ್ಕೆ ನಿಮ್ಮಿಂದ ಒಂದು ಪತ್ರ ಅವರಿಗೆ ಬೇಕು ಎನ್ನುವುದನ್ನು ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ತಿನ ವಿರೋಧಪಕ್ಷದ ನಾಯಕರೂ ಆದ ಮಾನ್ಯ ನಾಣಯ್ಯನವರು ತಮ್ಮ ಗಮನಕ್ಕೆ ತಂದಿರುವುದು ತಮಗೆ ನೆನಪಿರಬಹುದು. ಮತ್ತು ಶೇಖಡಾವಾರು ವಸೂಲಿ ಕಡಿಮೆಯಾದರೆ, ಅವರು ರೀಫೈನಾನ್ಸ್ ಮಾಡುವುದಿಲ್ಲ ಎಂಬ ಬಗ್ಗೆ ಇರತಕ್ಕ ಕ್ಲಾಸ್ ಕೂಡ ನಮಗೂ ಗೊತ್ತಿದೆ. ಈ ಎರಡು ವಿಚಾರಗಳಲ್ಲಿ ನಾವು ನಬಾರ್ಡ್ ಸಂಸ್ಥೆಯವರೆ ಜೊತೆಯಲ್ಲಿ ಮಾತನಾಡಿದ್ದೇವೆ. ಆಮೇಲೆ ಮಹಾರಾಷ್ಟ್ರಕ್ಕೆ ಈ ನಬಾರ್ಡ್‌ನವರು ಏನು ಕನಿಷ್ಟ ರಿಯಾಯಿತಿ ಮಾಡಿದ್ದಾರೆ. ಆ ರಿಯಾಯಿತಿಯನ್ನು ಅಲ್ಲಿ ಮಾಡುವುದಕ್ಕೆ ಸಾಧ್ಯವಾದರೆ, ಕರ್ನಾಟಕದಲ್ಲಿ ಏಕೆ ಮಾಡುವುದಿಲ್ಲ ? ಈ ದೃಷ್ಟಿಯಲ್ಲಿ ನಿಮ್ಮ ಪ್ರಯತ್ನದಲ್ಲಿ ವಿಫಲರಾಗಿದ್ದೀರಿ ಇದು ಒಂದು. ನಬಾರ್ಡ್‌ನವರು ಮತ್ತು ನಿಮ್ಮ ವ್ಯವಹಾರದ ಮಧ್ಯೆ ಇಲ್ಲಿಯೇ ಇದು ತೀರ್ಮಾನವಾಗ ತಕ್ಕಂಥ ಪರಿಸ್ಥಿತಿಯ ಅರಿವು ನನಗಾದುದರಿಂದ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಎರಡನೆಯದು, ತಾವು ಈಗ ನಬಾರ್ಡ್ ವಿಚಾರಕ್ಕಾಗಿ ಕೇಂದ್ರಕ್ಕೆ ಹೋಗಬೇಕು, ಎರಡು ಕ್ಲಾಸ್‌ಗಳನ್ನು ತೆಗೆಯಬೇಕೆಂಬ ಮಾತನ್ನು ಹೇಳಿದ್ದೀರಿ. ಅದಕ್ಕೆ ನಾವು ಹೇಳಿದ್ದೇವೆ, ಮಾರ್ಚ್ ಕೊನೆಯವರೆಗೆ ಅದಕ್ಕೆ ಅವಕಾಶ ಇದೆ. ೧೯ನೇ ತಾರೀಖು ಬರತಕ್ಕಂಥ ಕೇಂದ್ರದ ಬಡ್ಜೆಟ್. ಪರಿಣಾಮಕಾರಿಯಾಗಿ ಹೊರ ಬಂದರೆ, ಪುನಃ ನಬಾರ್ಡ್ ಸಂಸ್ಥೆಯವರನ್ನು ಕೇಳತಕ್ಕಂಥ ಪರಿಸ್ಥಿತಿ ಉದ್ಭವವಾಗುವುದಿಲ್ಲ. ನಮ್ಮ ಮಾನ್ಯ ಮಂಜುನಾಥ್‌ರವರು ಬಂದು ಮಾತು ಹೇಳಿದರು. ಬಿಜೆಪಿ ನವರು ಏಕೆ ಮಾಫ್ ಮಾಡುತ್ತಾರೆ ಎಂದು. ಬಿ.ಜೆ.ಪಿ.ಯವರು ಏನು ಮಾಡಬೇಕೋ, ಬಿಡಬೇಕೋ ಅದು ಆ ಪಕ್ಷಕ್ಕೆ ಬಿಟ್ಟಿದ್ದು. ಈ ವಿಚಾರದಲ್ಲಿ ಮಂಜುನಾಥ್‌ರವರ ನೀತಿ ಆಥವಾ ಬುದ್ಧಿವಾದ ಏನೂ ಬೇಕಾಗುವುದಿಲ್ಲ. ಅವರು ಬುದ್ಧಿವಾದ ಹೇಳುವುದಾದರೆ, ಅಲ್ಲಿಯೇ ಟೆಂಟ್ ಬಳಿ ಹೋಗಿ ಹೇಳಬೇಕು. ಅವರು ಶಾಸನ ಸಭೆಯಲ್ಲಿ ಏಕೆ ಈ ಮಾತು ಹೇಳುತ್ತಾರೋ ಗೊತ್ತಿಲ್ಲ. ಈ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಮಂಜುನಾಥ್‌ರವರ ಗಮನಕ್ಕೆ ತರುತ್ತೇನೆ. ದೇಶದ ಪ್ರತಿಯೊಂದು ರಾಜ್ಯಗಳೂ ಮತ್ತು ರಾಷ್ಟ್ರವನ್ನು ಆಳತಕ್ಕಂಥ ಪಕ್ಷ ಮತ್ತು ಸರ್ಕಾರ ಇವೆಲ್ಲವೂ...

೧೨.೩೦ ಪಿ.ಎಂ.

ಈ ೧೦ ಸಾವಿರ ೧೨ ಸಾವಿರದ ಒಳಗಿನ ಸಾಲವನ್ನು ಮನ್ನಾ ಮಾಡುವುದಕ್ಕೆ ಬದ್ಧವಾಗಿವೆ. ಪ್ರತಿ ಚುನಾಯಿತ ರಾಜ್ಯ ಸರಕಾರಗಳು ಮತ್ತು ಕೇಂದ್ರ ಸರಕಾರ ಇದರ ಬಗ್ಗೆ ಹೇಳಿವೆ. ಆದರೆ ಕರ್ನಾಟಕ ಒಂದೇ ಇದಕ್ಕೆ ಎಕ್ಸೆಪ್‌ಷನ್. ಏತಕ್ಕೆ ನೀವು ಎಕ್ಸೆಪ್‌ಷನ್ ಆಗುತ್ತೀರಿ? ಕರ್ನಾಟಕದವರಂ

ಮಾತ್ರ ಈ ಮಾತನ್ನು ಹೇಳಲಿಲ್ಲ. ಇದಕ್ಕಾಗಿ ನಿಮ್ಮನ್ನು ಕೇಳುತ್ತಿದ್ದೇನೆ. ಇಡೀ ದೇಶದಲ್ಲಿ ಒಂದು ಅಭಿಪ್ರಾಯ, ಇಡೀ ದೇಶದಲ್ಲಿರತಕ್ಕಂಥ ರಾಜ್ಯಗಳಲ್ಲಿ ಒಂದೇ ಒಂದು ಅಭಿಪ್ರಾಯ ಇದೆ. ಆದರೆ ಕರ್ನಾಟಕ ರಾಜ್ಯ ಈ ಅಭಿಪ್ರಾಯಕ್ಕೆ ಏತಕ್ಕೆ ಹೊರತಾಗಿದೆ. ಏತಕ್ಕೆ ಹತಹಿಡಿದು ಕುಳಿತಿದ್ದೀರಿ. ೧೭ ಜನ ಇದ್ದೀರಿ. ಏನು ಮಾಡುವುದಕ್ಕೆ ಆಗುವುದಿಲ್ಲ ? ಮನಸ್ಸಿದ್ದರೆ ಮಾರ್ಗ ಇದೆ. ಅದನ್ನು ಆಲೋಚನೆ ಮಾಡಿ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).— ಈಗ ಒಂದು ಸ್ಪಷ್ಟೀಕರಣ ಕೊಡುತ್ತೇನೆ. ಬಹುಶಃ ಇದು ಚರ್ಚೆಯಾಗಿದೆ. ನಾನು ತಾತ್ಪರ್ಯಕವಾಗಿ ರಿಕವರಿ ನಿಲ್ಲಿಸುತ್ತೇನೆಂದು ಹೇಳಿದ್ದೆ. ಡೆಲ್ಲಿಗೆ ಹೋಗಿ ಬರುವವರೆಗೆ ರಿಕವರಿ ನಿಲ್ಲಿಸುತ್ತೇನೆಂದು ಹೇಳಿದ್ದೆ. ರಿಕವರಿಯನ್ನೇ ಮಾಡುವುದಿಲ್ಲ ಎಂದು ಹೇಳಲಿಲ್ಲ. ಇದೊಂದೇ ಆಧಾರದ ಮೇಲೆ ನಬಾರ್ಡ್‌ನವರು ನಮಗೆ ಫೈನಾನ್ಸ್ ನಿಲ್ಲಿಸಿಬಿಟ್ಟರು. ಇದು ಆದಮೇಲೆ ನಾವು ಅವರ ಜೊತೆ ಪತ್ರವ್ಯವಹಾರ ಮಾಡಿದ್ದಾಯಿತು. ಒಂದು ವೇಳೆ ಮುಖ್ಯಮಂತ್ರಿಗಳು ರಿಕವರಿ ಮಾಡಬೇಡಿ ಎಂದು ಆದೇಶ ಕೊಟ್ಟಿದ್ದರೂ ನೀವು ಅದನ್ನು ಆನುಸರಿಸಬೇಡಿ ಇಂಪ್ಲಿಮೆಂಟ್ ಮಾಡಬೇಡಿ ಎಂದು ನಮ್ಮ ಆಫೀಸರ್ಸ್, ಆ ರೀತಿ ಪತ್ರವ್ಯವಹಾರ ಮಾಡಿದ್ದಾರೆ. ಅದರ ಬಗ್ಗೆ, ಚರ್ಚೆಯಾಗಿದೆ. ರಿಕವರಿ ನಿಲ್ಲಿಸಿಲ್ಲ ಎಂದಮೇಲೆ, ಪತ್ರವ್ಯವಹಾರ ಮಾಡಿದಮೇಲೆ ಲ್ಯಾಂಡ್ ಡೆವೆಲಪ್‌ಮೆಂಟ್ ಬ್ಯಾಂಕ್‌ಗೆ ರಿಫೈನಾನ್ಸ್ ಪ್ರಾರಂಭ ಮಾಡಿದರು. ಅಪೆಕ್ಸ್ ಬ್ಯಾಂಕ್‌ಗೆ ನಿಲ್ಲಿಸಿದರು. ರಿಫೈನಾನ್ಸ್ ಮಾಡುವುದಿಲ್ಲ ಎಂದರು. ಆಗ ಮತ್ತೆ ಪತ್ರವ್ಯವಹಾರ ಮಾಡಿದಾಗ ಹೇಳಿದರು, ಹಿಂದಿನ ಸರಕಾರದವರು ಇಂಟರೆಸ್ಟ್ ಸಬ್ಸಿಡಿ ಕೊಡುತ್ತೇವೆಂದು ಏನು ಹೇಳಿದ್ದಾರೆ, ಅದರ ಬಾಬತ್ತು ನೀವು ಇಷ್ಟು ದುಡ್ಡು ಕೊಡಬೇಕಾಗಿದೆ. ಆ ದುಡ್ಡು ಕೊಡುವವರೆಗೆ ನಾವು ರಿಫೈನಾನ್ಸ್ ಮಾಡುವುದಿಲ್ಲ ಎಂಬ ಮಾತನ್ನು ಹೇಳಿದರು. ಆ ವೇಳೆಗೆ ನಾವು ಹೇಳಿದೆವು, ನಮಗೆ ಕಷ್ಟ ಇದೆ, ಹಿಂದಿನವರು ಏನು ಹೇಳಿದ್ದಾರೆ, ಅದನ್ನು ಒಂದೇ ಒಂದು ದಿವಸದಲ್ಲಿ ಮಾಡುವುದಕ್ಕೆ ಆಗುವುದಿಲ್ಲ, ಅದಕ್ಕೆ ೫೦.೫೫ಕೋಟಿ ಕೊಡಬೇಕಾಗುತ್ತದೆ. ಅದರ ಬಲುವಾಗಿ ನೀವು ರಿಫೈನಾನ್ಸ್ ನಿಲ್ಲಿಸಬೇಡಿ, ನಮಗೆ ಕಷ್ಟವಾಗುತ್ತದೆ ಎಂದು ಹೇಳಿದಮೇಲೆ ಮತ್ತೆ ಅವರು ಹೇಳಿದರು. ಅದನ್ನು ಕೊಡುತ್ತೇವೆಂದು ಹೇಳಿ. ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿ ಎಂದು ಹೇಳಿದರು. ಅವರು ಏನೇನು ಹೇಳಿದರು ಅದನ್ನೆಲ್ಲಾ ಒಪ್ಪಿಕೊಂಡ ಮೇಲೆ ಆಪೆಕ್ಸ್ ಬ್ಯಾಂಕ್‌ಗೆ ಫೈನಾನ್ಸ್ ಮಾಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ. ಮೊನ್ನೆ ಕಾಗದ ಬಂದಿದೆ. ಅದು ಇವತ್ತಿಗೆ ಮಾತ್ರ ನಾವು, ನೀವು ಕಲೆತು ನಿಯೋಗ ಹೋಗೋಣ ಎಂದು ಹೇಳಿದ್ದು ಮುಂದಿನ ವರ್ಷದ ಸಾಲ ಕೊಡುವ ಬಗ್ಗೆ ಮುಂದಿನ ವರ್ಷದ ರಿಫೈನಾನ್ಸ್ ಬಗ್ಗೆ. ಕೇಂದ್ರ ಸರ್ಕಾರದ ಬಜೆಟ್ ಬರುತ್ತಿದೆ. ಕಾದು ನೋಡೋಣ ಎಂದು ತಾವು ಹೇಳುತ್ತಿದ್ದೀರಿ. ನಾನೂ ಒಪ್ಪುತ್ತೇನೆ. ನಾನು ಇವತ್ತು ಈಸ್ಥಳದಲ್ಲಿ ಕಂಳಿತುಕೇಂದ್ರ ಸರಕಾರದ ಮೇಲೆ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಕೇಂದ್ರ ಸರಕಾರದ ಮನಸ್ಸು ಏನಿದೆ ಎಂದು ಕೇಂದ್ರದ ಹಣಕಾಸಿನ ಮಂತ್ರಿಗಳ ಮನಸ್ಸು ಏನಿದೆ ಎಂದು ನನಗೆ ಗೊತ್ತಿದ್ದ ಹಾಗೆ, ಅವರು ಇವತ್ತು ಏನಾದರೂ ಒಂದು ಕೊಡು, ಇನ್‌ಸ್ಟಾಲ್‌ಮೆಂಟ್ ವೇವ್ ಮಾಡಬಹುದೇ ಹೊರತು ಇಂಟರೆಸ್ಟ್ ವೇವ್ ಮಾಡಬಹುದೇ ಹೊರತು, ಆದರಲ್ಲಿ ೫೦ ಪರ್ಸೆಂಟ್ ಮನ್ನಾ ಮಾಡಬಹುದೇಹೊರತು, ಅವರೇನು ಎಲೆಕ್ಷನ್ ಮ್ಯಾನಿಫೆಸ್ಟೋನಲ್ಲಿ ೧೦ ಸಾವಿರ ಸಾಲ ಮನ್ನಾ ಮಾಡುತ್ತೇವೆ ಎನ್ನುವ ಮಾತು ಹೇಳಿದ್ದಾರೆ, ಬಹುಶಃ ಇವತ್ತಿನ ಬಜೆಟ್‌ನಲ್ಲಿ, ಇವತ್ತಿನ ಫೈನಾನ್ಷಿಯಲ್ ಪೊಸಿಷನ್ ನಲ್ಲಿ ಅದನ್ನು ಮಾಡುವುದಕ್ಕೆ ಆಗುವುದಿಲ್ಲ. ಆದರೆ ನಾವೂ ನೀವೂ ಸೇರಿ ಧನ್ಯವಾದ ಹೇಳಿ, ಭಾಷಣ ಮಾಡಿ, ಚಪ್ಪಾಳೆ ತಟ್ಟಿ ಕಳುಹಿಸಿಕೊಡೋಣ. ಆದು ಆಗುವ ಮಟ್ಟಿಗೆ ಕಾಣುತ್ತಿಲ್ಲ. ಪರಿಸ್ಥಿತಿ ಏನಿದೆ, ಏನು ರಿಲೀಫ್ ಕೊಡುತ್ತಾರೆ ನೋಡೋಣ. It all depends upon our recovery, ರಿಕವರಿ ಪರ್ಸೆಂಟ್ ಆಗಿಲ್ಲ ಎಂದು ನಬಾರ್ಡ್‌ನವರು ಹೇಳಿದರೆ ನಾವೂ ನೀವೂ ಸಾಯುವುದಿಲ್ಲ, ರೈತ ಸಾಯುತ್ತಾನೆ ಅವನ ರಕ್ಷಣೆ ಮಾಡುವುದಕ್ಕೆ ನಿಯೋಗ ಹೋಗೋಣ ಎಂದು ನಾನು ಹೇಳಿದೆ. ಇವತ್ತು ಸಂಜೆ ೪ ಘಂಟೆಯವರೆಗೆ ಕಾದು ನೋಡಿ, ಆಮೇಲೆ ಹೇಳಿ.

ಶ್ರೀ ಬಾಬಾ ಗೌಡ ಪಾಟೀಲ್ (ಕಿತ್ತೂರು).— ಸನ್ಮಾನ್ಯ ಮುಖ್ಯಮಂತ್ರಿಗಳು ನಾವು ಒತ್ತಾಯದಿಂದ ಸಾಲ ವಸೂಲಿ ಮಾಡುತ್ತಿಲ್ಲ ಎಂದು ಹೇಳಿದರು. ರೈತರ ಮಾತು ಬಿಡಲಿ, ಶೀರಾ ಬಡವರು, ಕೂಲಿಗಾರರು ಏನಿದ್ದಾರೆ ಅವರಿಂದ ವಸೂಲಿ ಮಾಡಲಾಗುತ್ತಿದೆ. ನಿನ್ನೆ ಸಿದ್ದಾಪುರ ತಾಲ್ಲೂಕಿನ ಹವಾರಗಾ ಗ್ರಾಮದಲ್ಲಿ ಹರಿಜನರ ನಾಲ್ಕು ಜನ ಜನತಾ ಮನೆ ಬಾಕಿ ಕೊಡಲಿಲ್ಲ ಎಂದು ಕೀಲಿ ಹಾಕಿ ಹೊರಗೆ ಹಾಕಿದರು ಎಂಬ ವಿಚಾರವನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಸವದತ್ತಿ ತಾಲ್ಲೂಕಿನಲ್ಲಿ ಪ್ಲೋಲೀಸರನ್ನು ಕರೆದುಕೊಂಡು.

ಅಧ್ಯಕ್ಷರು.— ತಾವು ಡೀಟೈಲ್ಸ್‌ಗೆ ಹೋಗುತ್ತಿದ್ದೀರಿ. ವಿವರಗಳಿಗೆ ಹೋಗುತ್ತಿದ್ದೀರಿ We are talking about adjurnment motion.

ಪ್ರೊ. ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ).— ಮಾನ್ಯ ಅಧ್ಯಕ್ಷರೇ, ವಿವರಗಳನ್ನು ಹೇಳಬೇಕಾಗುತ್ತದೆ. ಪಂತ್ರ ನಾನು ತಮಗೆ ಮೊನ್ನೆದಿನ ಒಂದು ನೋಟೀಸ್ ಕಳುಹಿಸಿ ಕೊಟ್ಟಿದ್ದೆ. ದಾಖಲೆಗಳನ್ನು ಕಳುಹಿಸಿದ್ದೆ. ಆದರೆ ಅವಕಾಶ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಲಿಲ್ಲ. ಆ ನಡುವೆ ನಾನು ಹಣಕಾಸಿನ ಮಂತ್ರಿಗಳು ಮಾತನಾಡುವಾಗ ಮಾತನಾಡ ಬೇಕಾಯಿತು. ನಿಮಗೆ ಅದರಿಂದ ಎಷ್ಟು ಬೇಜಾರಾಗಿದೆಯೋ ನನಗೂ ಅಷ್ಟೇ ಬೇಜಾರಾಗಿದೆ.

ಕಲಾಪ ಈ ರೀತಿ ನಡೆಯಬಾರದು ಎನ್ನುವ ಸಲುವಾಗಿಯೇ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಷಯ ತರಬಯಸುತ್ತೇನೆ. ಬಲಾತ್ಕಾರವಾಗಿ ಸಾಲ ವಸೂಲು ಮಾಡುತ್ತಿಲ್ಲವೆಂದು ಹೇಳಿದ್ದುದು ಸತ್ಯಕ್ಕೆ ಬಹಳ ದೂರವಾದ ಮಾತು. ಇದರ ಬಗ್ಗೆ ನಾನು ಒಂದು ಪ್ರಶ್ನೆ ಕಳುಹಿಸಿದ್ದೆ. ಅದು ಬರಲಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಬೇಕೆಂದಿರುವುದು ಮಾನ್ಯ ಸದಸ್ಯರಾದ ಬಾಬಾಗೌಡರು ಹೇಳಿದ್ದನ್ನೇ ಹೇಳಬೇಕಾಗಿದೆ. ಅದೇನೆಂದರೆ ಸವದತ್ತಿ ತಾಲ್ಲೂಕಿನ ಹೋಲೂರು, ಬೆಳಗಾಂ ಜಿಲ್ಲೆಯ ನಸಲಾಪುರ ಗ್ರಾಮಗಳಲ್ಲಿ ನಿಮ್ಮ ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳು ಲ-ಜಿ ವ್ಯಾನ್‌ಗಳಲ್ಲಿ ಪೋಲೀಸ್‌ರವರನ್ನು ಕರೆದು ಕೊಂಡು ಹೋಗಿ ಯಾವ ಯಾವ ವಸ್ತುಗಳನ್ನು ಸಿವಿಲ್ ಪ್ರೊಸೀಜರ್ ಕೋಡ್ ಸೆಕ್ಷನ್ ೬೦ರ ಪ್ರಕಾರ ಯಾವ ಯಾವ ವಸ್ತುಗಳನ್ನು ಜಪ್ತಿ ಮಾಡಬಾರದೆಂದು ಹೇಳುತ್ತದೆಯೋ ಅದೇ ವಸ್ತುಗಳನ್ನು ಇವೊತ್ತು ಜಪ್ತಿ ಮಾಡುತ್ತಿದ್ದಾರೆ. ಮತ್ತೇ ಬಜೆಟ್ ಮಂಡನೆ ದಿವಸ ನಾನು ಹೇಳಿದ್ದುದು ಕಾನೂನು ಪ್ರಕಾರ ಕೆಲಸ ಮಾಡುವಂತಹ ವ್ಯವಸ್ಥೆಯನ್ನು ನಾವು ಸರ್ಕಾರ ಎಂದು ಹೇಳುತ್ತೇವೆಎಂದು ಕಾನೂನು ಮೀರಿದಂ ಕೆಲಸ ಮಾಡುವಂತಹ ವ್ಯವಸ್ಥೆಯನ್ನು ಸರ್ಕಾರ ಎಂದು ಹೇಳುವುದಕ್ಕೆ ಆಗುವುದಿಲ್ಲ. ನಾನೊಂದು ಪತ್ರವನ್ನು ಬರೆದು ದಾಖಲೆಗಳ ಸಮೇತ ಕಳುಹಿಸಿದ್ದೇನೆ' ಕೊಳ್ಳೆಗಾಲದಲ್ಲಿ ಯಾವ ಯಾವ ವಸ್ತುಗಳನ್ನು ಮಾರಾಟ ಮಾಡಿದ್ದಾರೆ? ಲೋಟ, ತಟ್ಟೆ, ಚಂಬು, ಹಂಡೆ, ಇಂತಹ ವಸ್ತು ಗಳನ್ನು ಜಪ್ತಿ ಮಾಡಿದ್ದಾರೆ. ಇಂತಹದನ್ನು ನಿಲ್ಲಿಸಂವಂತೆ ತಾವು ತಕ್ಷಣ ಅಧಿಕಾರಿಗಳಿಗೆ ಆದೇಶ ನೀಡ ಬೇಕು. ಮತ್ತೆ ಇದೇ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ನಿಮ್ಮ ಸರ್ಕಾರ ಅಲ್ಲ. ಹಿಂದೆ ಇದ್ದಂತಹ ಸರ್ಕಾರದ ರಾಜ್ಯದ ಹೈಕೋರ್ಟ್‌ನಲ್ಲಿ ಸೆಕ್ಷನ್ ೬೦ ಸಿವಿಲ್ ಪ್ರೊಸಿಜರ್ ಕೋಡ್ ಪ್ರಕಾರ ಒಂದು ಮಂಚ್ಚಳಿಕೆಯನ್ನು ಬರೆದು ಕೊಟ್ಟಿತ್ತು. ಅದೇನೆಂದರೆ ಒಂದು ವಿಶೇಷವಾದ ಪ್ರಕಟಣೆ ಯನ್ನು ಹೊರಡಿಸುತ್ತೇವೆ ಎಂದು ಹೇಳಿದರು. ಇದರಲ್ಲಿ ಏನೇನು ಇರಬೇಕೆಂದರೆ ಬೇರೆ ಬೇರೆ ವರ್ಗಗಳಿಗೆ ಸಾಲದ ವಸೂಲಾತಿಯಲ್ಲಿ ಏನೇನು ವಿನಾಯಿತಿ ಇದೆಯೋ ಅದನ್ನು ರೈತರಿಗೆ ಕೊಡಬೇಕು. ಈ ಆದೇಶ ಸಿವಿಲ್ ಪ್ರೊಸಿಜರ್ ಕೋಡ್ ಸೆಕ್ಷನ್ ೬೦ರಲ್ಲಿ ಇದೆ. ಅದೇ ಪ್ರಕಾರ ಒಂದು ನೋಟಿಫಿಕೇಷನ್ ಹೊರಡಿಸಂತ್ತೇವೆಂದು ಹಲವಾರು ವರ್ಷಗಳ ಹಿಂದೆ ಈ ಸರ್ಕಾರ ಮಂಚ್ಚಳಿಕೆ ಬರೆದು ಕೊಟ್ಟಿತ್ತು. ಅದನ್ನು ನಾವು ಈ ಸದನದಲ್ಲಿ ಕೇಳುತ್ತಿದ್ದೇವೆ. ಯಾವಾಗ ಆದೇಶವನ್ನು ಹೊರಡಿಸುತ್ತೀರಿ? ನ್ಯಾಯಾಲಯದ ಆದೇಶ ಪಾಲಿಸುತ್ತೀರಾ? ಅದೇ ಪ್ರಕಾರ ರೈತನು ಬೆಳೆದಂತಹ ದವಸ ಧಾನ್ಯಗಳನ್ನು ಜಪ್ತಿ ಮಾಡಬಾರದು? ಸಿವಿಲ್ ಪ್ರೊಸಿಜರ್ ಕೋಡ್ ಸೆಕ್ಷನ್ ೬೦ರ ಪ್ರಕಾರ ವಿಶೇಷ ಪ್ರಕಟಣೆಯನ್ನು ನೀವು ಯಾವಾಗ ಹೊರಡಿಸುತ್ತೀರಿ? ಉಚ್ಚ ನ್ಯಾಯಾಲಯಕ್ಕೆ ನೀವು ಮುಚ್ಚಳಿಕೆಯನ್ನು ಬರೆದು ಕೊಟ್ಟಿದ್ದೀರಿ.

ಶ್ರೀ ವಾಟಾಳ್ ನಾಗರಾಜ್.—ಅದಕ್ಕೆ ಸಂಬಂಧಪಟ್ಟಂತೆ ಒಂದು ವಿಷಯವನ್ನು ಪ್ರಸ್ತಾಪ ಮಾಡಂತ್ತೇನೆ ಮಾನ್ಯ ಅಧ್ಯಕ್ಷರೇ, ಅದೇನೆಂದರೆ ನನ್ನ ತಾಲ್ಲೂಕಿನಲ್ಲಿ ಇದೇ ರೀತಿಯಾದ ಹರಾಜು ಮಾಡಲು ೨೨ನೇ ತಾರೀಖಿನ್ನು ಗುರುತು ಮಾಡಿದ್ದಾರೆ. ಈ ಬಗ್ಗೆ ನಾನು ಮಾನ್ಯ ಸಹಕಾರ ಮಂತ್ರಿಗಳಿಗೆ ಒಂದು ಕಾಗದ ಬರೆದು ಈ ಹರಾಜನ್ನು ಮಾಡಲು ತಡೆಯಾಜ್ಞೆ ಕೊಡಬೇಕೆಂದು ಕೇಳಿದೆ. ಆಗ ಅವರು ಹೇಳಿದರು ಯಾರಿಗೂ ತೊಂದರೆ ಕೊಡುತ್ತಿಲ್ಲ, ಸಾಲ ವಸೂಲಿ ಮಾಡುತ್ತಿಲ್ಲವೆಂದು. ಆದರೆ ಮೊನ್ನೆಯಿಂದ ಸಾಲ ವಸೂಲಾತಿ ನಡೆಯುತ್ತಿದೆ. ಹರಾಜು ಹಾಕುತ್ತಿದ್ದಾರೆ. ನಾನು ಸಂಪ್ಮಾರು ೨೦ ಜನ ರೈತರ ಪರವಾಗಿ ಬರೆದು ತಡೆಯಾಜ್ಞೆ ನೀಡಿ ಎಂದು ಕೇಳಿದೆ. ರಾಜ್ಯದಲ್ಲಿ ಎಲ್ಲೆಡೆ ಸಾರ್ವತ್ರಿಕವಾಗಿ ಈ ರೀತಿ ನಡೆಯುತ್ತಿದೆ. ಇದು ಯಾವುದೋ ಒಂದು ಪಕ್ಷದ ಪ್ರಶ್ನೆಯಲ್ಲ ಕಾಂಗ್ರೇಸ್ಸ್ ಪಕ್ಷದ ಪ್ರಶ್ನೆಯಲ್ಲ, ಜನತಾ ಪಕ್ಷದ ಪ್ರಶ್ನೆಯಲ್ಲ, ಅಥವಾ ಬಿ.ಜೆ.ಪಿ. ಪಕ್ಷದ ಪ್ರಶ್ನೆಯಲ್ಲ. ಇದು ರಾಜ್ಯದ ಸಮಗ್ರ ರೈತರ ಪ್ರಶ್ನೆ. ಮಾನ್ಯಮಂಖ್ಯಮಂತ್ರಿಗಳು ದಯವಾಡಿ ಗಂಭೀರವಾಗಿ ಯೋಚನೆ ಮಾಡಿ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಉತ್ತರ ಕೊಡಬೇಕು. ತಾವು ಬಹಳ ಸ್ಪಷ್ಟವಾದ ತಿಳಿಕನ್ನಡದಲ್ಲಿ ಉತ್ತರ ಕೊಟ್ಟರೆ ರೈತರ ಸಮಸ್ಯೆ ಬಗೆಹರಿಸಲು ಸಾಧ್ಯವಾಗುವುದಿಲ್ಲ. ಅವರ ಸಮಸ್ಯೆ ಬಗೆಹರಿಸವ ದಿಸೆಯಲ್ಲಿ ಉತ್ತರ ಕೊಡಬೇಕೆಂದುನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿರೇಂದ್ರ ಪಾಟೀಲ್.—ಮಾನ್ಯ ಸದಸ್ಯರಾದ ಪ್ರೊ. ನಂಜುಂಡಸ್ವಾಮಿಯವರು ಹೇಳಿದರು ಕೆಲವು ಕಡೆ ಒತ್ತಾಯದಿಂದ ವಸೂಲು ಮಾಡುತ್ತಿದ್ದಾರೆ, ಮತ್ತೇ ಹಂಡೆ ಲೋಟ ಹರಾಜು ಮಾಡುತ್ತಿದ್ದಾರೆ ಎಂದು ಹೇಳಿದರು ಈಗ ಒತ್ತಾಯ ಮಾಡಿ ಸಾಲ ವಸೂಲು ಮಾಡಬಾರದು ಆ ರೀತಿ ಮಾಡುವುದು ಸರಿಯಲ್ಲ. ಆದರೆ ಒಂದು ವಿಚಾರ ೧೦ ಸಾವಿರ ರೂಪಾಯಿಗಳ ಕೆಳಗಿನ ಸಾಲದ ಬಗ್ಗೆ ನಾವೆಲ್ಲ ಇಲ್ಲಿ ಚರ್ಚೆ ಮಾಡುತ್ತಿರುವುದು ಅವರ ಸಾಲವನ್ನು ಯಾವ ರೀತಿಯಾದರೂ ಮನ್ನಾ ಮಾಡಬೇಕೆಂದು. ೧೦ ಸಾವಿರ ರೂಪಾಯಿಗಳ ಕೆಳಗಿನ ಸಾಲ ಇರುವಂತಹ ರೈತರ ಮೇಲೆ ಈ ತರಹ ದೌರ್ಜನ್ಯವೇನಾದರೂ ನಡೆಡಿದ್ದರೆ ಆ ಬಗ್ಗೆ ತಾವು ನನಗೆ ವಿವರಗಳನ್ನು ಕೊಟ್ಟರೆ ತಕ್ಷಣ ಅದರ ಬಗ್ಗೆ ವಿಚಾರಿಸಿ ತಪ್ಪು ಮಾಡಿದ್ದರೆ ತಪ್ಪನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ೧೦ ಸಾವಿರ ರೂಪಾಯಿಗಳಿಗೂ ಮೇಲ್ಪಟ್ಟಂತಹ ಶ್ರೀಮಂತ ರೈತರು ಯಾರು ಇರುತ್ತಾರೋ ಅಂತಹವರ ಸಾಲ ವಸೂಲಿ ಮಾಡುವಂತಹ ಪ್ರಶ್ನೆ ಬಂದಾಗ ಶ್ರೀಮಂತರ ಸಾಲದ ಬಗ್ಗೆ ನಮಗೆ ಬಡವರ ಸಾಲದ ಬಗ್ಗೆ ಎಷ್ಟು ಅನುಕಂಪ ಇಟ್ಟಿದ್ದೇವೆಯೋ ಅಷ್ಟೇ ಅನುಕಂಪ ಶ್ರೀಮಂತ ರೈತರ ಸಾಲದ ಮೇಲೆ ಇರತಕ್ಕಂಥಾದ್ದು ಅಲ್ಲವೆನ್ನುವ ವಿಚಾರವನ್ನು ನಾನು ಹೇಳುತ್ತೇನೆ.

ಪ್ರೊ ಎಂ. ಡಿ. ನಂಜುಂಡಸ್ವಾಮಿ.—ಶ್ರೀಮಂತ ರೈತರ ಮನೆಗಳಲ್ಲಿ ಹಂಡೆ ಲೋಟ ಜಪ್ತಿ ಮಾಡಬೇಡಿ.

ಶ್ರೀ ವೀರೇಂದ್ರ ಪಾಟೀಲ್.—ಬಡವರ ಮನೆಯಲ್ಲಿ ಹಾಗೂ ೧೦ ಸಾವಿರ ಒಳಪಟ್ಟಿರುವ ಸಾಲಗಾರರ ಮನೆಯಲ್ಲಿ ಜಪ್ತಿ ಮಾಡಿರುವ ವಿವರಗಳನ್ನು ಕೊಟ್ಟರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ.—ಕೂಲಿ ಗ್ರಾಮದಲ್ಲಿ ನೀರಾವರಿ ಟ್ಯಾಕ್ಸ್ ಕಟ್ಟದೇ ಇದ್ದ ಸಲುವಾಗಿ ರೈತರುಗಳ ಮನೆಗಳನ್ನು ಜಪ್ತಿ ಮಾಡುತ್ತಿದ್ದಾರೆ. ಮಾನ್ಯ ಮಲ್ಲನಗೌಡ ಪಾಟೀಲರು ನಮ್ಮ ಜಿಲ್ಲೆಗೆ ಬಂದಿದ್ದಾಗ ಇದರ ಬಗ್ಗೆ ನಾವು ತಿಳಿಸಿದ್ದೆವು. ಮೂರು ಎಕರೆ, ನಾಲ್ಕು ಎಕರೆ ಜಮೀನು ಇರುವ ಬಡವರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಇದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ?

ಶ್ರೀ ವೀರೇಂದ್ರ ಪಾಟೀಲ್.—ನನ್ನ ಗಮನಕ್ಕೆ ಬಂದರೆ ತಾನೇ ಕ್ರಮ ತೆಗೆದುಕೊಳ್ಳುವುದು?

## ಗಮನ ಸೆಳೆಯುವ ಸೂಚನೆಗಳು

### ಕೋಲಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಅಭಾವದಿಂದ ರೈತರುಗಳು ಪಂಪುಸೆಟ್ಟುಗಳಿಗೆ ಆಗಿರುವ ತೊಂದರೆ

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ, ನೀರಾವರಿ ಮತ್ತು ಇಂಧನ ಮಂತ್ರಿಗಳು)—

ಕೋಲಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿಯ ಅಭಾವದಿಂದ ರೈತರ ನೀರೆತ್ತುವ ಪಂಪುಸೆಟ್ಟುಗಳಿಗೆ ಕನಿಷ್ಟ ವಿದ್ಯುಚ್ಛಕ್ತಿ ಸರಬರಾಜಿಲ್ಲದೆ, ವ್ಯವಸಾಯದ ಕೆಲಸಗಳು ಕುಂಟಿತವಾಗಿರುತ್ತೆ ಮತ್ತು ಮುಂದಿನ ಬೇಸಿಗೆಯಲ್ಲಿ ಪರಿಸ್ಥಿತಿ ಮತ್ತಷ್ಟು ಉಲ್ಬಣವಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಸರ್ಕಾರದವರು ಮೇಲ್ಕಂಡ ಪರಿಸ್ಥಿತಿಯನ್ನು ಸುಧಾರಿಸಲು ಹಾಕಿಕೊಂಡಿರುವ ಯೋಜನೆಗಳ ಬಗ್ಗೆ

ಕೋಲಾರ ಜಿಲ್ಲೆಯಲ್ಲಿ ದಿನಾಂಕ ೩೧-೩-೧೯೮೯ರವರೆಗೆ ೭೮,೯೧೭ ನೀರಾವರಿ ಪಂಪುಸೆಟ್ಟುಗಳನ್ನು ಸರ್ವಿಸ್ ಮಾಡಲಾಗಿತ್ತು. ಈ ಸಾಲಿನಲ್ಲಿ (೧೯೮೯-೯೦) ಕೋಲಾರ ಜಿಲ್ಲೆಗೆ ೩,೬೦೦ ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸುವ ಗುರಿ ಹೊಂದಿದ್ದು ಫೆಬ್ರುವರಿ ೧೯೯೦ರ ಅಂತ್ಯದವರೆಗೆ ೩೦೨೦ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ. ಈಗ ಹಾಕಿಕೊಂಡಿರುವ ಗುರಿಯಲ್ಲಿ ಉಳಿದಿರುವ ಬಾಕಿಯನ್ನು ಈ ವರ್ಷದ ಅಂತ್ಯದೊಳಗೆ ಮುಗಿಸಲಾಗುವುದು.

ಕೋಲಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಸರಬರಾಜಿನ ಗುಣ ಮಟ್ಟವನ್ನು ಸುಧಾರಿಸಲು ಈ ಕೆಳಕಂಡ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.

೧) ಕೋಲಾರದಲ್ಲಿ ೧೪೦೦ ಎಂ. ವಿ. ಎ, ೨೨೦/೬೬ ಕೆ. ವಿ. ಸ್ಟೇಷನ್ ಅನ್ನು ದಿನಾಂಕ ೨೯-೮-೧೯೮೯ರಂದು ಕಮೀಷನ್ ಮಾಡಲಾಗಿದೆ,